**<u>ದಿನಾಂಕಃ 31-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ</u> ಪ್ರತಿವಾದಿ ರವರ ಪರ ಶ್ರೀಮತಿ. ಟಿ. ಕೆ. ಆರ್. ವಕೀಲರಿಂದ

1. ನಿಪಿ.1 ನ್ನು ಬರೆದುಕೊಡುವ ಮೊದಲು ಪ್ರತಿವಾದಿಯ ತಾಯಿ ಪದ್ಮಾವತಿ ಒಬ್ಬರೇ ಹಣ ಕೇಳಲು ಬಂದಿದ್ದರು. ಅವರ ಜೊತೆ ಬೇರೆ ಯಾರು ಬಂದಿಲ್ಲ. ಅಪ್ರಾಪ್ತ ಮಕ್ಕಳ ಹಕ್ಕು ಇರುವ ಆಸ್ತಿಯನ್ನು ಮಾರಾಟ ಮಾಡಲು ನ್ಯಾಯಾಲಯದ ಅನುಮತಿ ಪಡೆಯಬೇಕೆಂದರೆ ನನಗೆ ಗೊತ್ತಿಲ್ಲ. ನಿಪಿ.1 ರ ವಿಚಾರವನ್ನು ಪದ್ಮಾವತಿ ಹೇಳಿ ಬರೆಯಿಸಿರುತ್ತಾರೆ. ಆರು ತಿಂಗಳ ಒಳಗೆ ನೋಟೀಸ್ ಕೊಡಲು ನನಗೆ ತೊಂದರೆ ಇರಲಿಲ್ಲ. ಎಂಟು ತಿಂಗಳ ನಂತರ ನೋಟೀಸ್ ನೀಡಿರುತ್ತೇನೆ ಎನ್ನುವುದು ಸರಿ. ಪಿ. ಡಬ್ಲ್ಯೂ 3 ರವರು ನನ್ನ ಸ್ನೇಹಿತರು ಎಂದರೆ ಸರಿ.

2. ಪ್ರತಿವಾದಿಯ ತಾಯಿ ಪದ್ಮಾವತಿ ರೂ. 3 ಲಕ್ಷ ಸಾಲ ಹಣ ಪಡೆದಿದ್ದರು ಅದರ ಭದ್ರತೆಗಾಗಿ ನಿಪಿ.1 ನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಚೆಕ್ಕುಗಳನ್ನು ನಾನು ಎಂ. ಜಿ. ರವಿ ರವರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ ಪದ್ಮಾವತಿಗೆ ಕೊಟ್ಟಿದ್ದೆ. ಪದ್ಮಾವತಿ ರವರು ನನ್ನಿಂದ ಕೇವಲ 3 ಲಕ್ಷ ಮಾತ್ರ ಹಣ ಪಡೆದಿರುತ್ತಾರೆ ಎಂದರೆ ಉಪನೋಂದಣಾಧಿಕಾರಿ ರವರ ಎದುರಿಗೆ 2 ಲಕ್ಷ ಪಡೆದಿರುತ್ತಾರೆ. ಪದ್ಮಾವತಿ ಮತ್ತು ಅವರ ಅಣ್ಣ ಎಂ. ಜಿ. ರವಿ ರವರು 3 ಲಕ್ಷ ಹಣ ವಾಪಸ್ಸು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಹಣ ಪಡೆದು ನಾನು ಒಪ್ಪಂದ ರದ್ದುಗೊಳಿಸಲು ಹುಷಾರಿಲ್ಲ ಎಂದು ಒಂದು ತಿಂಗಳ ಕಾಲ ಸಮಯ ತೆಗೆದುಕೊಂಡೆ ಎಂದರೆ ಸುಳ್ಳು.

3. ಪದ್ಮಾವತಿ ತಾಯಿ ಜಯಮ್ಮ ಬದುಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾದ ಆಸ್ತಿಯ ಮೌಲ್ಯ ಆ ಸಮಯದಲ್ಲಿ 15 ಲಕ್ಷ ಇತ್ತು ಎನ್ನುವುದು ಸುಳ್ಳು. ದಾವಾದ ಆಸ್ತಿಯಲ್ಲಿ ಅವರು ಎರಡು ವರ್ಷಗಳ ಹಿಂದೆಯೇ ತಳಪಾಯ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ತಳಪಾಯ ಹಾಕಿದ ವಿಚಾರ ನಾನು ನಿಪಿ.1 ರಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದರು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ